# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ

ಸುಧಾ ಪಾಟೀಲ
ಉಪನ್ಯಾಸಕರು, ಅನೂಪ್ ಕುಮಾರ್ ಜಾಂಬೋಟಿ, ಪ್ಲಾಟ್ ನಂ: 481. ಮುರಳೀಧರ ಕಾಲೋನಿ, 3ನೇ ಹಂತ, ಹನುಮಾನ್ ನಗರ, ಬೆಳಗಾವಿ.

DOI: https://doi.org/10.5281/zenodo.18701532

## ABSTRACT:

ಆಧುನಿಕೋತ್ತರ ಕಾಲಘಟ್ಟದಲ್ಲಿ ಮಹಿಳೆಯರು ತಮ್ಮ ಅಸ್ತಿತ್ವ ಮತ್ತು ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟವು ಸಾಹಿತ್ಯದಲ್ಲಿ ಪ್ರಬಲವಾಗಿ ಅಭಿವ್ಯಕ್ತಗೊಂಡಿದೆ. ಪರಂಪರಾಗತವಾಗಿ ಧಾರ್ಮಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಶೋಷಣೆಗೆ ಒಳಗಾದ ಮಹಿಳೆ, ಇಂದು ಶಿಕ್ಷಣ ಮತ್ತು ಸ್ವಾವಲಂಬನೆಯ ಮೂಲಕ ತನ್ನ ಸಂವೇದನೆಗಳನ್ನು ದೃಢವಾಗಿ ಮಂಡಿಸುತ್ತಿದ್ದಾಳೆ. ವಚನ ಸಾಹಿತ್ಯದಿಂದ ಹಿಡಿದು ಸಮಕಾಲೀನ ಬರಹಗಾರ್ತಿಯರಾದ ವೈದೇಹಿ, ಸಾರಾ ಅಬೂಕ್ಕರ್, ಮಾಲತಿ ಪಟ್ಟಣಶೆಟ್ಟಿ ಮುಂತಾದವರ ಕೃತಿಗಳಲ್ಲಿನ ಸ್ತ್ರೀಪರ ದನಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಭ್ರೂಣ ಹತ್ಯೆ, ಕೌಟುಂಬಿಕ ದೌರ್ಜನ್ಯ ಮತ್ತು ಅಸಮಾನತೆಯ ವಿರುದ್ಧದ ಆಕ್ರೋಶವು ಸಾಹಿತ್ಯದ ಮೂಲಕ ಹೇಗೆ ಪ್ರತಿಫಲಿಸಿದೆ ಎಂಬುದನ್ನು ಗುರುತಿಸಲಾಗಿದೆ. ಜಾನಪದ ಹಾಗೂ ಶಿಷ್ಟ ಸಾಹಿತ್ಯದ ಹಿನ್ನೆಲೆಯಲ್ಲಿ, ಮಹಿಳೆ ತಾನು ಅಬಲೆಯಲ್ಲ ಸಬಲೆ ಎಂದು ನಿರೂಪಿಸುವ ಬಗೆ ಮತ್ತು ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧದ ಪ್ರತಿರೋಧದ ನೆಲೆಗಳನ್ನು ಈ ಬರಹವು ಶೋಧಿಸುತ್ತದೆ.

## KEYWORDS:

ಆಧುನಿಕೋತ್ತರ ಸ್ತ್ರೀ ಸಂವೇದನೆ, ಮಹಿಳಾ ಸಾಹಿತ್ಯ, ಅಸ್ಮಿತೆ ಮತ್ತು ಪ್ರತಿರೋಧ, ಪುರುಷ ಪ್ರಧಾನ ವ್ಯವಸ್ಥೆ, ಸಾಮಾಜಿಕ ನ್ಯಾಯ.

**ಪೀಠಿಕೆ:**

ಆಧುನಿಕೋತ್ತರ ಕಾಲದಲ್ಲಿ ಸ್ತ್ರೀ ಸಂವೇದನೆಯು ಪ್ರಮುಖ ಅಂಶವಾಗಿ ಹೊರಹೊಮ್ಮಿದೆ. ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ ಶೋಷಣೆ ಅನ್ಯಾಯಗಳ ವಿರುದ್ಧ ಹೋರಾಡಲು ಸನ್ನದ್ಧರಾದರು. ಹಾಗೆಯೆ ಸಮಾಜದ ಚಲನೆಯಲ್ಲಿ ಗಂಡಿಗೆ ಸಿಕ್ಕ ಮಾನ್ಯತೆ ಹೆಣ್ಣಿಗೆ ಸಹಜವಾಗಿ ಲಭ್ಯವಾಗುತ್ತಿಲ್ಲ. ಹೀಗೆ ಈ ಸಮಾಜದಲ್ಲಿ ಒಂದು ಅವಿಭಾಜ್ಯ ಅಂಗವೆನಿಸಿಕೊಂಡ ಮಹಿಳೆ ಪರಂಪರೆಯಿಂದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ಕೌಟುಂಬಿಕವಾಗಿ, ಬೌದ್ಧಿಕವಾಗಿ ಅಧೀನ ನೆಲೆಯಲ್ಲಿಯೇ ಗುರುತಿಸಲ್ಪಟ್ಟಿದ್ದಾಳೆ. ಸಾಹಿತ್ಯ ಸಮಾಜವನ್ನು ಪ್ರತಿಬಿಂಬಿಸುವುದರಿಂದ ಪ್ರತಿ ಮಹಿಳೆ ತನ್ನ ಹತಾಶೆ, ತಲ್ಲಣ, ಆಕ್ರೋಶ, ಸ್ವಂತಿಕೆಯ ಅಭಿವ್ಯಕ್ತಿಗೆ ಆಧುನಿಕೋತ್ತರ ಸಮಾಜವು ಈ ಸ್ತ್ರೀ ಸಂವೇದನೆಯನ್ನು ಗುರುತಿಸಲ್ಪಟ್ಟಿದೆ. ಹೇಗೆ ಇಲ್ಲಿ ತನ್ನನ್ನು ತಾನು ಸ್ತ್ರೀ ವ್ಯಕ್ತಪಡಿಸಿಕೊಳ್ಳುತ್ತಾಳೆಂದರೆ ಸಾಹಿತ್ಯ, ಕಲೆ, ರಂಗಭೂಮಿ, ಸ್ವತಂತ್ರ ಅಭಿವ್ಯಕ್ತಿ, ಆತ್ಮವಿಶ್ವಾಸ, ಕೆಲವೊಂದು ಸಾಂಪ್ರದಾಯಿಕ ಕಟ್ಟುಪಾಡುಗಳು ಇವುಗಳನ್ನು ಮೆಟ್ಟಿ ಎಲ್ಲದರಲ್ಲೂ ಭಾಗಿಯಾಗಿ ಪ್ರತಿಯೊಂದರಲ್ಲೂ ಧ್ವನಿ ಎತ್ತುತ್ತಿದ್ದಾಳೆ. ಹಾಗೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಎನ್ನುವ ವಿಷಯ ಬಹು ದೊಡ್ಡ ವ್ಯಾಪ್ತಿಯುಳ್ಳದ್ದು.

ಈ ಸ್ತ್ರೀ ಸಂವೇದನೆ ಎಂದರೆ ಮಹಿಳೆಯರ ಬದುಕು, ಅನುಭವಗಳು, ಭಾವನೆಗಳು, ಶೋಷಣೆ ಮತ್ತು ಆಕಾಂಕ್ಷೆಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ಗೌರವಿಸುವ ಸಾಮಾಜಿಕ ಮನೋಭಾವವಾಗಿದೆ. ಹಾಗೂ ಮಹಿಳೆಯರ ಬರವಣಿಗೆಗಳಲ್ಲಿ ವ್ಯಕ್ತವಾಗಿರುವ ಸ್ತ್ರೀ ಸಂವೇದನೆಗಳನ್ನು ಕುರಿತು ಮಾತನಾಡುವ ಚೌಕಟ್ಟು ಹಾಕಿಕೊಂಡಿದ್ದೇನೆ. ಬರೆಯುವ ಪ್ರಯತ್ನ ಪಟ್ಟಿದ್ದೇನೆ. ಹಾಗೆಯೆ ಇಲ್ಲಿ ಮಹಿಳೆಯರು ತಮ್ಮ ಸ್ವಾತಂತ್ರ್ಯದ ಹಕ್ಕಿನ ಬಗ್ಗೆ ಹೋರಾಡುತ್ತಾ ಬಂದಿದ್ದಾರೆ. ವಚನ ಸಾಹಿತ್ಯದ ಕಾಲದಿಂದ ಹಿಡಿದು (12 ನೇ ಶತಮಾನ) ಇಂದಿನವರೆಗೆ ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀ ಸಂವೇದನೆಯನ್ನು ಕಾಣುತ್ತೇವೆ. ಅಂತಹ ಮಹಿಳೆಯರ ಸಾಲಿನಲ್ಲಿ ಬರುವವರು ವಚನ ಸಾಹಿತ್ಯದಲ್ಲಿ ಅಕ್ಕಮಹಾದೇವಿ, ಗಂಗಮ್ಮ, ಮೌರ್ಯಕ್ಕ, ಲಕ್ಕವ್ವ. ವಚನ ಸಾಹಿತ್ಯದಿಂದ ಮುಂದುವರೆದು ಬರುವುದಾದರೆ 20 ನೇ ಶತಮಾನದ ಪೂರ್ವದಲ್ಲಿ ತಿರುಮಲಾಂಬ, ಶಾಂತಾಬಾಯಿ ನೀಲಗಾರ ಮುಂತಾದವರು. ಅದೇ (20 ನೇ ಶತಮಾನ) ನಂತರ ಶಾರದಾ ಎಚ್.ಎಸ್, ಸುನಂದಾ ಬೆಳಗಾಂವಕರ್, ಪ್ರೇಮಾಭಟ್, ಬಿ.ಟಿ.ಲಲಿತಾ ನಾಯಕ್, ವಿಜಯಾ ದಬ್ಬೆ, ಮಲ್ಲಿಕಾ ಘಂಟಿ, ಮಾಲತಿ ಪಟ್ಟಣಶೆಟ್ಟಿ ಮೊದಲಾದ ಕವಯತ್ರಿಯರು. ಇವರು ಬರೆದ ಎಷ್ಟೋ ವಚನ, ಕೀರ್ತನೆ, ಕವಿತೆ, ಕಾದಂಬರಿಗಳು ಆಧುನಿಕೋತ್ತರ ಸ್ತ್ರೀ ಸಂವೇದನೆ ಮೇಲೆ ಬೆಳಕು ಚೆಲ್ಲುತ್ತಿವೆ.

**ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ:**

ಇಡಿಯಾಗಿ ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ಮಹಿಳೆ ತನ್ನ ಸಾಹಿತ್ಯ ಚರಿತ್ರೆಯನ್ನು ತಾನೇ ಕಟ್ಟಿಕೊಳ್ಳಬೇಕಾಗಿ ಬಂದ ದುರಂತವನ್ನು ನೋಡಿದಾಗ ತುಂಬಾ ವಿಷಾದವೆನಿಸುತ್ತದೆ. ಹೌದು ಅವಳಿಗೆ ಮೊದಲು ಸ್ವಾತಂತ್ರ್ಯವಿರಲಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅವನ ನೆರಳಿನಲ್ಲಿ ಬದುಕಬೇಕಾಗಿತ್ತು. ಆದರೆ ಆಧುನಿಕೋತ್ತರ ಕಾಲದಲ್ಲಿ ಮಹಿಳೆ ಕೇವಲ ಗೃಹಿಣಿಯಾಗಿ ಉಳಿಯದೆ ಶಿಕ್ಷಣ, ಉದ್ಯೋಗ, ರಾಜಕೀಯ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಮಾಜದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅವರ ಸಂವೇದನೆಗಳು ಸಾಹಿತ್ಯದಲ್ಲಿ ಹೊಸ ದೃಷ್ಟಿಕೋನಗಳನ್ನು ಮೂಡಿಸುತ್ತಿವೆ ಮತ್ತು ಸಮಾಜದಲ್ಲಿ ಮಹಿಳೆಯರ ಸ್ಥಾನವನ್ನು ಮರು ವ್ಯಾಖ್ಯಾನಿಸುತ್ತಿದೆ. ಹಿರಿಯರ ನಾನುಡಿಯಂತೆ "ಕಲಿತ ನಾರಿ ಮನೆಗೆ ಉಪಕಾರಿ" ಎನ್ನುವಂತೆ 12 ನೇ ಶತಮಾನ – 20 ನೇ ಶತಮಾನಕ್ಕೆ ಕಾಲಿರಿಸುವವರೆಗೆ ಮಹಿಳೆಯರೇ ರಚಿಸಿದ ಸಾಹಿತ್ಯವನ್ನು ಮಹಿಳಾ ಸಾಹಿತ್ಯ ಎನ್ನುತ್ತೇವೆ. ಮಹಿಳೆ ಸೃಜನಶೀಲಳಾಗಿ ಹೊರಬಂದು ಸ್ತ್ರೀಸಂವೇದನೆಗೆ ಹೋರಾಡಿದ್ದು ನಮಗೆ ಕಾಣುವುದು. 20 ನೆಯ ಶತಮಾನದಿಂದ "ಅಕ್ಷರ ಕಲಿತ ನಾರಿ ದೇಶದ ಪ್ರಗತಿಗೆ ದಾರಿ" ಎನ್ನುವ ಮಾತು ಸುಳ್ಳಲ್ಲ.

ಸ್ತ್ರೀ ಸಂವೇದನೆ ನೆಲೆಗಟ್ಟಿನಲ್ಲಿ ನಮ್ಮ ಮಹಿಳೆಯರ ಸಾಲಿನಲ್ಲಿ ಮೊದಲು ನಾವು ನಂಜನಗೂಡು ತಿರುಮಲಾಂಬಾ ಅವರನ್ನು ಕಾಣುತ್ತೇವೆ. ಇವರು ಸಮಾಜದಲ್ಲಿನ ಮಹಿಳೆ ಅವಳಿಗೆ ಬೇಕಾದ ಸ್ತ್ರೀ ಸ್ಥಾನಮಾನ, ಬೇಕಾದಂತಹ ಪಾತ್ರ ಸನ್ನಿವೇಶಗಳನ್ನು ಅವರ ಕೃತಿಗಳಲ್ಲಿ ಕಾಣುತ್ತೇವೆ. ಸಮಾಜದ ವಾತಾವರಣವನ್ನು ತಮ್ಮ ಬರವಣಿಗೆ ಮುಖೇನ ಬದಲಿಸಿದರು. ಸ್ತ್ರೀಯರೂ ವಿಧವೆಯಾಗಬೇಕು ಎಂಬುದನ್ನು ಇವರು ಪ್ರತಿಪಾದಿಸಿದರು (ಗಮನಿಸಿ: ಮೂಲ ವಾಕ್ಯ ಅಸ್ಪಷ್ಟವಾಗಿದೆ, ಬಹುಶಃ ವಿಧವಾ ವಿವಾಹದ ಬಗ್ಗೆ ಇರಬಹುದು). ಸ್ತ್ರೀ ಎಂದರೆ ಬರಿ ಅಡುಗೆ ಮನೆಗೆ ಸೀಮಿತಳು ಅಲ್ಲ ಅಧಿಕಾರದ ಚುಕ್ಕಾಣಿ ಕೂಡ ಹಿಡಿಯಬಲ್ಲಳು ಎಂಬುದನ್ನು ಆವಾಗಲೆ ಅವರ ಕೃತಿಯಲ್ಲಿ ಬರೆದಿಟ್ಟರು. ಇಂತಹ ಅಭೂತಪೂರ್ವ ಮಹಿಳಾ ಸಾಹಿತಿಗಳನ್ನು

ಆಧುನಿಕೋತ್ತರ ಕಾಲದಲ್ಲಿ ಕಾಣುತ್ತೇವೆ. ಸ್ತ್ರೀ ಸಂವೇದನೆಯಲ್ಲಿ ಮಹಿಳೆಯ ಒಂದು ಸ್ಥಾನ ಏನೆಂದು ಈ ನಿಟ್ಟಿನಲ್ಲಿ ಚರ್ಚೆಗಳು ನಡೆಸಿ, ಆನಂತರದ ಬರವಣಿಗೆ ಬರಹಗಳ ಮುಖಾಂತರ ಸ್ತ್ರೀ ಸಂವೇದನೆ ಬಗ್ಗೆ ಆಳವಾದ ಅಧ್ಯಯನ ಮಾಡುತ್ತಾ ಹೋದಾಗ ಸಾವಿರಾರು ವರ್ಷಗಳ ಇತಿಹಾಸ ಹೊಂದಿದ್ದರು. ಮಹಿಳೆಯರ ಕುರಿತು ಸಾಹಿತ್ಯ ಕಾಣಸಿಗುವುದು ತುಂಬಾ ವಿರಳ. ಆದರೂ ಸ್ತ್ರೀ ತನ್ನ ಶಕ್ತಿ ಸಾಮರ್ಥ್ಯ ಏನೆಂಬುದನ್ನು ಅವಳು ತೋರಿಸುವಲ್ಲಿ ಬಲಿಷ್ಠಳಾದಳು. ಸ್ತ್ರೀಯನ್ನು ಶಾಸ್ತ್ರ, ಸಂಪ್ರದಾಯದ ಧರ್ಮಗಳು, ಸಂಸ್ಕೃತಿಯಲ್ಲಿ ಅವಳನ್ನು ಹಿಂದೆತಳ್ಳುವ ಕೆಲಸ ನಡೆದವು. ಈ ಒಂದು ಪದ್ಧತಿ, ರೀತಿ ನೀತಿಯನ್ನು ಸಹಿಸದ ಕವಯತ್ರಿ ಡಾ॥ ಎಚ್. ಎಲ್.ಪುಷ್ಪಾ ತಮ್ಮ ಕವಿತೆಯಲ್ಲಿ ಈ ರೀತಿಯಾಗಿ ತಮ್ಮ ಅಂತರಾಳದ ಖೇದವನ್ನು ಹೊರಹಾಕುತ್ತಾಳೆ.

**“ತಾತ ಮುತ್ತಾತರ ಕಾಲದಿಂದ**
**ಮಠದೇಗುಲಗಳ ದಾಟಿ ಬೀದಿಗೆ**
**ಬಾರದ ಹಾಗೆ ತಡೆದಿವೆ ನೀತಿ ಶಾಸ್ತ್ರಗಳು”**

ಹಾಗಾದರೆ ಸ್ತ್ರೀಯನ್ನು ದೇವತೆ ಎಂದೂ ಮಾತೃದೇವೋ ಭವ ಎಂದೂ ಕರೆದ ಸನಾತನ ಧರ್ಮ ಅದೇ ಉಸಿರಿನಲ್ಲಿ “ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ” ಎಂದೂ ಗಂಡ ತೀರಿದ ಹೆಣ್ಣು ಮುಂಡೆ ಎಂದೂ ಘೋಷಿಸುತ್ತವೆ. ಕಾಲ ಬದಲಾಗಿದೆ ಹೆಣ್ಣು ಮಕ್ಕಳು ಈಗ ವಿದ್ಯಾವಂತರಾಗಿದ್ದಾರೆ. ಸರಿಸಮನಾಗಿ ಕೆಲಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ಸುಧಾರಿಸಿದ್ದಾರೆ. ಆದರೂ ಕೌಟುಂಬಿಕ ಮತ್ತು ಆರ್ಥಿಕವಾಗಿಯೂ ಕೂಡ ಸುಧಾರಿಸಿದ್ದಾರೆ. ಸ್ತ್ರೀಯರನ್ನು ಅಬಲೆ ಎಂದು ಕರೆದರೆ, “ಅವಳು ಅಬಲೆ ಅಲ್ಲ ಸಬಲೆ” ಎಂದು ಆಧುನಿಕೋತ್ತರ ಕಾಲದ ಸ್ತ್ರೀಯರು ತೋರಿಸಿಕೊಡುತ್ತಿದ್ದಾರೆ. ಸನಾತನ ಧರ್ಮದಲ್ಲಿ ಸ್ತ್ರೀಯರನ್ನು ದೇವತೆ ಎಂದೂ ಕರೆದಿದೆ. ಹಿರಿಯರ ಬಗ್ಗೆ ಗೌರವ (ಗುರುಬ್ರಹ್ಮ....), ಸ್ತ್ರೀಯರ ಬಗ್ಗೆ ಗೌರವ (ಯತ್ರ ನಾರ್ಯಸ್ತು ಪೂಜ್ಯಂತೇ.....), ತಾಯಿ ತಂದೆ ಗುರುಗಳ ಬಗ್ಗೆ ಗೌರವ (ಮಾತೃ ದೇವೋಭವ). ಅಷ್ಟೇ ಅಲ್ಲ ನಮ್ಮ ನದಿಗಳಿಗೆಲ್ಲ ಸ್ತ್ರೀಯರ ಹೆಸರನ್ನೇ ಇಟ್ಟಿವೆ. ಬೆಳಿಗ್ಗೆ ಎದ್ದೊಡನೆ “ಕರಾಗ್ರೇ ವಸತೇ ಲಕ್ಷ್ಮೀ ಕರ ಮಧ್ಯೆ ಸರಸ್ವತಿ..” ಎಂದು ಗುಣಗಾನ ಮಾಡಲು ಹೇಳಿದೆ. ಆದರೆ ಅದೇ ಸನಾತನ ಧರ್ಮ ಹೆಣ್ಣು ಮಣ್ಣುಗಳ ಮೇಲೆ ಆಸೆ ಇಡಬಾರದೆಂದು ಎಚ್ಚರಿಸಿದೆ. ಸನಾತನ ಧರ್ಮ ಹೇಳುವಂತೆ “ಗಂಡ ತೀರಿದೊಡನೇ ಅದೇ ಸ್ತ್ರೀ ಮುಂಡೆಯಾಗುತ್ತಾಳಲ್ಲದೇ ಸುಮಂಗಲಿ ಅಮಂಗಲೆ” ಆಗುತ್ತಾಳೆ.

ಇವೆಲ್ಲವನ್ನು ಸಹಿಸಿ ಬದುಕಬೇಕಾದ ಕಾಲ ಒಂದಿತ್ತು. ಆದರೆ ಈಗಲೂ ಇದನ್ನು ಪಾಲಿಸುವರಿರಬಹುದು. ಸಮಯ ಬದಲಾಗುತ್ತಿದೆ. ಸ್ತ್ರೀ ಧರ್ಮವು ಸುಧಾರಿಸುತ್ತಿದೆ. ಆದರೂ ಸ್ತ್ರೀ ಸಂವೇದನೆ ಇನ್ನೂ ಸುಧಾರಿಸಿಲ್ಲ. ಅದೇ ಸ್ತ್ರೀ ತನ್ನ ನೋವು ಸಂಕಟವನ್ನು ಕವಿತೆಯ ಮುಖಾಂತರ ಹೇಳಿದ್ದಾಳೆ.

**ಹೆಣ್ಣು ಹೆಣ್ಣು ಎಂಬ ಸಣ್ಣ ಮಾತು ಬರಿ ಇದೇ ಏಕೆ**
**ಹೆಣ್ಣಿನಿಂದ ಜನನ ಹೆಣ್ಣಿನಿಂದ ಮರಣ**
**ಹೆಣ್ಣಿನಿಂದಲೇ ಜಗದ ಇರುವು**
**ಹೆಣ್ಣ ಹಳಿಯ ತರವು ಇರದು ನಿನಗೆ**
**ಜಗದಿ ಜನುಮವಿತ್ತು ತಾಯಿ ಹೆಣ್ಣು**
**ಹೆಣ್ಣು ಹೆಣ್ಣೆಂದು ನೀನು ನಿನ್ನ ಕನಸಿನಲ್ಲೂ ಹಳಿಯಬೇಡ**
**ತುಳಿಯಬೇಡ ಇರಲಿ ಎಚ್ಚರ.**

ಹಾಗೆ ಮಾಲತಿ ಪಟ್ಟಣಶೆಟ್ಟಿಯವರು ಬರೆದಿರುವ ‘ನಾ ಬರಿ ಭ್ರೂಣವಲ್ಲ’ ಎಂಬ

ಕವಿತೆಯಲ್ಲಿ ಭ್ರೂಣಾವಸ್ಥೆಯ ಒಂದು ಹೆಣ್ಣು ಭ್ರೂಣ ತನ್ನ ತಾಯಿಯೊಂದಿಗೆ ಸಂವಾದಿಸುತ್ತದೆ. ತಾಯಿ ಗರ್ಭದಲ್ಲೆ ಇದ್ದಾಗ ತನ್ನ ಅಸ್ತಿತ್ವವನ್ನು ನಿರಾಕರಿಸುವ ಸಮಾಜದ ಈ ವ್ಯವಸ್ಥೆ ಏನೆಂಬುದನ್ನು ಈ ಕವಿತೆಯಲ್ಲಿ ಸ್ತ್ರೀ ಸಂವೇದನೆ ಬಗ್ಗೆ ತಿಳಿಸುತ್ತಾಳೆ. ''ಹೆಣ್ಣು ಜಗದ ಕಣ್ಣು'' ಅದು ಬರಿ ಭ್ರೂಣವಲ್ಲ ಮಾಂಸದ ಮುದ್ದೆ ಅಲ್ಲ ನಾಳೆ ಜಗಕ್ಕೆ ಬೆಳಕಾಗುವದೆಂಬುದನ್ನು ತಿಳಿಸುತ್ತಾಳೆ. ಈ ಕವಿತೆಯಲ್ಲಿ ಆ ಮಗು ತಾಯಿಯನ್ನು ಕೇಳಿಕೊಳ್ಳುವ ರೀತಿ ಎಂತಹದು:

**ಅವ್ವಾ...... ನಾ ಬರೀ ಭ್ರೂಣವಲ್ಲ ನನ್ನವ್ವ**
**ಗೊತ್ತಿಲ್ಲವೆ ಮಗಳ ರಕ್ತ ರಕ್ತವಲ್ಲ ಪ್ರೀತಿ ರಸವೆ**
**ನಿನ್ನವ್ವನಾಗಿಯೇ ಬರುವೆ ನನ್ನ ಮುದ್ದಿನವ್ವ**
**ವರವ ಕೊಡು ತಾಯಿ ನನ್ನ ಉಸಿರಿಗೆ ನಿನ್ನ ಬಾಳ ಹೆಸರಿಗೆ..**

ಎನ್ನುವ ಈ ಕವಿತೆ ಸ್ವಲ್ಪಮಟ್ಟಿಗಾದರೂ ಕೆಲವರಲ್ಲಿ ಮಾನವೀಯತೆಯನ್ನು ಜಾಗೃತಿಗೊಳಿಸಿ ಅವರಲ್ಲಿ ಪರಿವರ್ತನೆಯನ್ನು ತರುವ ಶಕ್ತಿ ಈ ಕವಿತೆಗಿದೆ. ಅದು ಭ್ರೂಣವಲ್ಲ ತಾಯಿಯ ಕನಸಿನ ಕೂಸು. ಅದೊಂದು ಹೆಣ್ಣಿನ ಕನಸು ಭಾವ ಗುರಿಗಳನ್ನು ಗರ್ಭದಲ್ಲೆ ಚಿವುಟುವುದು ಕೂಡಾ ಮಹಾಪಾಪ ಎಂಬ ಎಚ್ಚರವನ್ನು ಮೂಡಿಸುತ್ತದೆ. ಹೆಣ್ಣು ಸಾಧನೆ ಮಾಡುವಳು ಅವಳಿಗೊಂದು ಅವಕಾಶ ನೀಡಿ ಎಂದು ಸಮಾಜಕ್ಕೆ ತಿಳಿಹೇಳುವ ಪ್ರಯತ್ನವಿದೆ. ಹಾಗೆ ತನ್ನೊಳಗೆ ಹುದುಗಿಸಿಟ್ಟ ನೋವುಗಳನ್ನು ಸಾಹಿತ್ಯದ ಮೂಲಕ ಹೊರಹಾಕುತ್ತಿದ್ದಾಳೆ. ಇಂತಹ ಸವಾಲುಗಳಿರುವ ಸಂಕೀರ್ಣ ವ್ಯವಸ್ಥೆಯಲ್ಲಿ ಮಹಿಳೆಗೆ ಎದುರಾಗುವ ಅನುಭವಗಳು ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

ಸ್ತ್ರೀ ಸಂವೇದನೆ ಬಗ್ಗೆ ಕೆಲವೊಂದು ಮಹಿಳೆಯರು ಹೇಳಿದ ಕಥೆಗಳನ್ನು ನೋಡಿದಾಗ ಸ್ತ್ರೀ ಎಂದರೆ ಏನು ಎಂಬುದರ ಬಗ್ಗೆ ಹೇಳಿದಾಗ ಅಂತಹ ಕಥೆಗಳ ಕೆಲವೊಂದು ಸಾಲುಗಳನ್ನು ನೋಡಬೇಕು ಎಂಬ ಪ್ರಯತ್ನ ಪಟ್ಟಿದ್ದೇನೆ. ವೈದೇಹಿ ಅವರು ಬರೆದಿರುವ 'ಅಮ್ಮಚ್ಚಿಯೆಂಬ ನೆನಪು', ಇದು ಒಂದು ಕಥಾಸಂಕಲನವಾದರು ಅಮ್ಮಚ್ಚಿಯೆಂಬ ನೆನಪು ಕಥೆಗಾಗಿಯೇ ಇದರ ಹುಡುಕಾಟ ಪ್ರಾರಂಭವಾಗಿದ್ದು, ಒಂದು ಸಾಮಾನ್ಯ ಘಟನೆಯನ್ನು ಕಥೆಯಾಗಿ ಮೆರೆಯುವಲ್ಲಿ ವೈದೇಹಿಯರ ಪಾತ್ರ ಹಿರಿದು.

ಸಮಾಜದ ಕಟ್ಟುಪಾಡುಗಳ ಒಳಗೆ ಸರಾಗವಾಗಿ ಉಸಿರಾಡುತ್ತಾ ತನ್ನದೇ ಆದ ಅಭೇದ್ಯ ಕೋಟೆಯನ್ನೇ ಸುತ್ತುವರಿಸಲ್ಪಟ್ಟ ಸಂಪ್ರದಾಯಗಳ ನಡುವೆ ನಲುಗುವ ಹೆಣ್ಣಿನ ಬಾಳು ಅವಳ ಗೋಳು ಅದರಲ್ಲಿನ ನೈತಿಕತೆ ಹಾಗೂ ಬದಲಾವಣೆ ಬಯಸುವ ಬದುಕು....

ಅಮ್ಮಚ್ಚಿಯೆಂಬ ನೆನಪು ಸರಾಗವಾಗಿ ಓದಿಸಿಕೊಂಡು ಹೋಗುವ ಅಮ್ಮಚ್ಚಿ.... ನೂರಾರು ಕನಸುಗಳನ್ನು ಕಟ್ಟಿಕೊಂಡ ಹುಡುಗಿ ಅವಳಿಗೆ ಜೊತೆ ಅವಳ ಗೆಳತಿ. ಅಮ್ಮಚ್ಚಿಯನ್ನು ಅವಳ ಗೆಳತಿಯ ಮಾತುಗಳಲ್ಲೇ ಪರಿಚಯ ಮಾಡಿಕೊಡುವ ಈ ಕಥೆ ಅಮ್ಮಚ್ಚಿಯ ತಳಮಳ... ಅವಳ ಅಳುವನ್ನು ಮೀರಿದ ಆಕ್ರೋಶತೆ..... ಕಡೆಗೆ ಉಳಿಯುವ ಅಸಹಾಯಕತೆ... ಹೀಗೆ ಎಲ್ಲವನ್ನು ಮೀರಿ ನಿಲ್ಲುವ ದಿಟ್ಟತೆ ಹೀಗೆ ವಿವಿಧ ಮಜಲುಗಳಲ್ಲಿ ಪ್ರತಿಬಿಂಬಿಸಿರುವ ಅವಳನ್ನು ಕೆಲವು ಸಂದರ್ಭಗಳಲ್ಲಿ ಶೋಷಣೆಗೆ ದಬ್ಬುವ ವೆಂಕಪ್ಪಯ್ಯನೆಂಬ ಗಂಡು ಜೀವ... ಹೀಗೆ ಪ್ರತಿಯೊಂದರ ಚಿತ್ರಣ ಅಮ್ಮಚ್ಚಿಯೆಂಬ ಕಥೆಯಲ್ಲಿ ಸ್ತ್ರೀ ಎಂಬ ಅವಳ ಆಸೆಗಳನ್ನು ಹೇಗೆ ಹಿಡಿದಿಟ್ಟು ಬದುಕುತ್ತಾಳೆ ಎಂಬುದು ತಿಳಿದು ಬರುತ್ತದೆ. ಹೀಗೆ ಹಲವಾರು ಕಥೆಗಳು ಇಲ್ಲಿ ಕಂಡುಬರುತ್ತವೆ.

ಎಚ್.ನಾಗವೇಣಿ ಅವರ ''ಗಾಂಧಿ ಬಂದಾಗ'' (ದಲಿತ ಸ್ತ್ರೀ ಸಂವೇದನೆ), ಹಾಗೆ ಸಾರಾ ಅಬೂಕ್ಕರ್ ಅವರ ''ಚಂದ್ರಗಿರಿಯ ತೀರದಲ್ಲಿ'' (ಮುಸ್ಲಿಂ ಸ್ತ್ರೀ ಸಂವೇದನೆ) ಬಗ್ಗೆ

ಹೇಳಿದ್ದಾರೆ. ಬಾನು ಮುಷ್ತಾಕ್ ಅವರ ''ಬೆಂದಕಾಳು'' (ಜೀವನಾನುಭವಗಳ ಚಿತ್ರಣ).

''ಚಂದ್ರಗಿರಿಯ ತೀರದಲ್ಲಿ'' ಇದು ಸಾರಾ ಅಬೂಕ್ಕರ್ ಅವರ ಕಾದಂಬರಿಯಾಗಿದ್ದು, ಕರಾವಳಿ ಕರ್ನಾಟಕದ ಮುಸ್ಲಿಂ ಸಮುದಾಯದ ಮಹಿಳೆಯರ ಶೋಷಣೆ ಇದೊಂದು ಮಹಿಳಾ ದಮನಿತ ಧ್ವನಿ. ನಫೀಸಾ ಪಾತ್ರದ ಮೂಲಕ ಶಿಕ್ಷಣ ಮತ್ತು ಸ್ವಾತಂತ್ರ್ಯದಿಂದ ವಂಚಿತರಾದ ಮುಸ್ಲಿಂ ಮಹಿಳೆಯರ ಆಕ್ರಂದನವನ್ನು ಕಾದಂಬರಿ ತೋರ್ಪಡಿಸುತ್ತದೆ.

ವೀಣಾ ಶಾಂತೇಶ್ವರ ಅವರು ಕೂಡ ಸ್ತ್ರೀ ಬಗ್ಗೆ ಬರೆದ ಒಂದು ಕಥೆ, ಈ ಕಥೆಯನ್ನು ''ನಡೆದಷ್ಟೇ ದಾರಿ'' ಎಂಬ ಅವರ ಸಮಗ್ರ ಕಥೆಯಿಂದ ಆಯ್ದುಕೊಳ್ಳಲಾಗಿದೆ. ಅವಳ ಸ್ವಾತಂತ್ರ್ಯ ಆಧುನಿಕ ಸಮಾಜದಲ್ಲಿ ಶಿಕ್ಷಣ ಮತ್ತು ಉದ್ಯೋಗಗಳು ಹೆಣ್ಣಿನ ಬದುಕಿಗೆ ಬಿಡುಗಡೆಯ ದಾರಿಗಳೆಂದು ಭಾವಿಸಲಾಗುತ್ತದೆ. ಆದರೆ ಹೆಣ್ಣನ್ನು ಕುರಿತು ಸಮಾಜದ ಆಲೋಚನೆ ಕ್ರಮದಲ್ಲಿ ಬದಲಾವಣೆಗಳಾಗದಿದ್ದರೆ ಅವಳ ಉದ್ಯೋಗ ಕೂಡ ಕುಟುಂಬ ರಾಜಕಾರಣದಲ್ಲಿ ಶೋಷಣೆಯಾಗಿ ಬಿಡುತ್ತದೆಯೆಂಬ ಪ್ರತಿಪಾದನೆ ಈ ಕಥೆಯಲ್ಲಿದೆ.

ನಾವು ಹೀಗೆ ಹಲವಾರು ಕಥೆ, ಕಾದಂಬರಿ, ಕಾವ್ಯ ಕೃತಿಗಳ ನೋಡಿದಾಗ ಮಹಿಳೆ ಸ್ತ್ರೀ ಎಂದರೆ ಏನು ಅವಳ ಪರಿಶ್ರಮ, ಗುರಿ ಸಮಾಜಕ್ಕೆ ತಿಳಿಯಬೇಕು. ಇವಳು ಜನಪದ ಸಾಹಿತ್ಯದ ಮುಖಾಂತರವೂ ಕೂಡ ಸ್ತ್ರೀ ಸಂವೇದನೆ ಬಗ್ಗೆ ಹೇಳುತ್ತಾಳೆ. ಸ್ತ್ರೀ ಇವರ ಕಥೆ ಕಾದಂಬರಿ ಮೂಲ ಹುಡುಕಿದರೆ ನಮ್ಮ ಜಾನಪದ ಜಗತ್ತಿನ ಸಾಹಿತ್ಯ ಪ್ರಪಂಚ ಎಷ್ಟು ಪ್ರಜ್ಞಾಪೂರ್ವಕವಾಗಿತ್ತು ಎಂದರೆ ಈ ಜನಪದ ಸಾಹಿತ್ಯದಲ್ಲಿ ಗರತಿಯ ಹಾಡುಗಳು ಸ್ತ್ರೀ ಬಗ್ಗೆ ತಿಳಿಸುತ್ತವೆ. ಹೆಣ್ಣು ತನ್ನ ಸಾಹಿತ್ಯದ ಮುಖೇನ ಹೇಳುತ್ತಾಳೆ. ಗರತಿಯೊಬ್ಬಳು ಹೆಣ್ಣು ಮಗುವಿಗೆ ಹಂಬಲಿಸಿ,

**ಗಂಡು ಮಕ್ಕಳ ಒಂಬತ್ತು ಕೊಡು ಸ್ವಾಮಿ**
**ಬಂಡಿಯ ಕಳಸಕ್ಕೆ ಒಪ್ಪುವಂತ ಒಬ್ಬ ಹೆಣ್ಣು ಮಗಳ ಕೊಡುದೇವ**

ಎಂದು ಗರತಿಯೊಬ್ಬಳು ಬೇಡುವ ರೀತಿಯಲ್ಲಿ ಸ್ತ್ರೀಗೆ ಎಂತಹ ಬೆಲೆಯಿತ್ತು ಎಂಬುದು ವೇದ್ಯವಾಗುತ್ತದೆ. ಇಂತಹ ಎಷ್ಟೋ ಸ್ತ್ರೀ ಮನಸ್ಸಿನಲ್ಲಿನ ಜನಪದ ಅವಳ ಒಳಮನಸಿನ ಅಂತರ್ಭಾವ ತೆರೆದಿಟ್ಟಿದೆ ಇಲ್ಲಿ.

**''ಅಂಜಿಕೆ ತೋರಿದರೆ ಅಂಜುವ ಮಗಳಲ್ಲ**
**ಮುಂಜಾವದಾಗ ಹುಲಿಕರಡಿ ತೋರಿದರೆ**
**ಅಂಜಿ ತಿರುಗುವವಳ ಮಗಳಲ್ಲ''**

ಪುರುಷನ ದಬ್ಬಾಳಿಕೆಗೆ ಹೆದರಿ ಬಾಳುವ ಹೆಣ್ಣು ತಾನಲ್ಲವೆಂದು ಹೇಳುವ ಜನಪದ ಹೆಣ್ಣು ತೋರುವ ಅಗಾಧ ಧೈರ್ಯ ಆಕೆಯಲ್ಲಿನ ಆತ್ಮಾಭಿಮಾನದ ಪ್ರತೀಕ.

ಒಟ್ಟಿನಲ್ಲಿ ಸ್ತ್ರೀವಾದಿ ಸಂವೇದನೆಯಲ್ಲಿ ಆಧುನಿಕೋತ್ತರ ಮಹಿಳಾ ಸಾಹಿತ್ಯ ಚರಿತ್ರೆಯನ್ನು ಪ್ರತ್ಯೇಕವಾಗಿ ಪರಿಗಣಿಸುವ ಬದಲು ಮಹಿಳೆಯರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ತ್ರೀವಾದಿಗಳು ತಮ್ಮ ಸಂವೇದನೆಯನ್ನು ಪುರುಷ ಸಮಾಜದ ಕುರಿತು ಇರುವ ಅಸಮಾಧಾನ, ತನ್ನ ಮನದ ತೊಳಲಾಟ, ತಾಕಲಾಟ ಅವುಗಳನ್ನು ಸಾಹಿತ್ಯ ಬರಹಕ್ಕೆ ಇಳಿಸಿ ಮನಸ್ಸು ಹಗುರಾಗಿಸುವ ಒಂದು ಔಷಧಿಯಂತೆ ಕಾಣಿಸುತ್ತದೆ. ಸಾಮಾಜಿಕವಾಗಿ ಅವಳ ಮನಸ್ಸಿನ ಮಾತುಗಳಿಗೆ ಮನ್ನಣೆ ಸಿಗಬೇಕಾಗಿದೆ. ಅಂತಹ ಮಹಿಳಾ ಪರ ಸ್ತ್ರೀವಾದಿ ಸಂವೇದನೆಗೆ ಸ್ತ್ರೀಯರೆಲ್ಲರೂ ಒಂದಾಗಬೇಕು.

**ಪರಾಮರ್ಶನ ಗ್ರಂಥಗಳು:**

1. ಮಲ್ಲಿಕಾ ಘಂಟಿ, (2020), ಸ್ತ್ರೀವಾದಿ ಚಿಂತನೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ಪ್ರತಿಭಾ ನಂದಕುಮಾರ್, (1990), ಕಾಫಿ ಹೌಸ್, ಬೆಂಗಳೂರು: ಪಂಚಮ ಪ್ರಕಾಶನ.
3. ಪ್ರತಿಭಾ ನಂದಕುಮಾರ್, (2020), ಅವ್ವ ಮತ್ತು ಇತರ ಕವಿತೆಗಳು, ಬೆಂಗಳೂರು: ಬಹುರೂಪಿ ಪ್ರಕಾಶನ.
4. ಶರೀಫಾ ಕೆ. (ಸಂ), (2015), ಹೊಸ ಶತಮಾನದ ಕಾವ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
5. ಶರೀಫಾ ಕೆ., (2020), ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ, ಗದಗ: ಲಡಾಯಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.